ಕಂಪ್ಯೂಟರ್ ಆಪರೇಟರ್	2	0	2
ಕಿರಿಯ ಆರೋಗ್ಯ ನಿರೀಕ್ಷಕರು	2	0	2
ಸಮುದಾಯ ಸಂಘಟಕರು	1	1	0
ದ್ವಿತೀಯ ದರ್ಜೆ ಸಹಾಯಕರು	3	3	0
ಕರವಸೂಲಿಗಾರರು	2	2	0
ವಾಹನ ಚಾಲಕರು	3	0	3
ಸಹಾಯಕ ವಾಟರ್ ಸಪ್ಲೈ ಆಪರೇಟರ್	4	4	0
ಪ್ಲಂಬರ್	1	0	1
ಸ್ಯಾನಿಟರಿ ಸೂಪರ್‌ವೈಸರ್	2	0	2
ಸೀನಿಯರ್ ವಾಲ್ವ್‌ಮೆನ್	2	0	2
ಪೌರಕಾರ್ಮಿಕರು	35	14	21
ಅಟೆಂಡರ್	3	1	2
ಲೋಡರ್ಸ್	8	0	8
ಕ್ಲೀನರ್ಸ್	2	0	2
ಗಾರ್ಡನರ್	1	2	0
ಹೆಲ್ಪರ್/ವಾಟರ್ ಸಪ್ಲೈ ವಾಲ್ವ್‌ಮೆನ್	8	0	8
ಒಟ್ಟು	**97**	**34**	**64**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :**(449)214**
ಮಾನ್ಯ ಸದಸ್ಯರ ಹೆಸರು :**ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ**
ಉತ್ತರಿಸುವ ಸಚಿವರು :**(ಶ್ರೀ ಜೆ.ಜನಾರ್ಧನ ರೆಡ್ಡಿ)**
:**ಪ್ರವಾಸ್ಯೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು**

ಅ) ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಯಾವ ಸ್ಥಳಗಳನ್ನು ಪ್ರವಾಸಿ ತಾಣಗಳೆಂದು ಗುರುತಿಸಲಾಗಿದೆ; ಈ ತಾಣಗಳ ಅಭಿವೃದ್ಧಿಗಾಗಿ ಸರ್ಕಾರ ಯಾವ ಕ್ರಮಗಳನ್ನು ರೂಪಿಸಿದೆ;

ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಕಾರಂಜೆ ಜಲಾಶಯ ಪ್ರದೇಶವನ್ನು ಪ್ರವಾಸಿ ತಾಣವೆಂದು ಗುರುತಿಸಲಾಗಿದೆ. ಈ ಜಲಾಶಯದ ಬಳಿ ಲ್ಯಾಂಡ್ ಸ್ಕೇಪಿಂಗ್, ಮಕ್ಕಳ ಉದ್ಯಾನವನ, ಇತ್ಯಾದಿಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಈ ಕ್ಷೇತ್ರದಲ್ಲಿ ಕಳೆದ 3 ವರ್ಷಗಳಲ್ಲಿ ಪ್ರವಾಸಿ ತಾಣಗಳು ಯಾವ ಯಾವ ಅಭಿವೃದ್ಧಿಗೆ ಪ್ರತಿ ವರ್ಷ ಎಷ್ಟೆಷ್ಟು ಹಣವನ್ನು ಖರ್ಚು ಮಾಡಲಾಗಿದೆ;

ಈವರೆವಿಗೆ ಈ ಪ್ರದೇಶದ ಅಭಿವೃದ್ಧಿಗಾಗಿ ಹಣವನ್ನು ವೆಚ್ಚ ಮಾಡಿರುವುದಿಲ್ಲ.

ಇ) ಈ ಪ್ರವಾಸಿ ತಾಣಗಳ ವೀಕ್ಷಣೆಗೆ ಬರುವ ಪ್ರವಾಸಿಗರಿಗೆ ಯಾವ ಯಾವ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ(ಪೂರ್ಣ ವಿವರಗಳನ್ನು ಒದಗಿಸುವುದು)

ನಿವೇಶನದ ಲಭ್ಯತೆ ಇಲ್ಲದಿದ್ದರಿಂದ ಈ ಪ್ರದೇಶದಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗುವುದಿಲ್ಲ

ಈ) ಪ್ರಸಕ್ತ ಸಾಲಿನಲ್ಲಿ ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಸರ್ಕಾರ ಯಾವ ಯಾವ ಯೋಜನೆಗಳನ್ನು ರೂಪಿಸಿದೆ ಮತ್ತು ಇದಕ್ಕೆ ಎಷ್ಟು ಹಣವನ್ನು ವೆಚ್ಚ ಮಾಡಲಿದೆ;

ಪ್ರಸಕ್ತ ಸಾಲಿನಲ್ಲಿ ಕಾರಂಜಿ ಡ್ಯಾಮ್ ಪ್ರದೇಶದಲ್ಲಿ ಸಂಗೀತ ಕಾರಂಜಿ, ಆಂಪಿ ಥಿಯೇಟರ್, ಲ್ಯಾಂಡ್ ಸ್ಕೇಪಿಂಗ್, ಮಕ್ಕಳ ಉದ್ಯಾನವನ, ವಾಹನ ನಿಲ್ದಾಣ, ದೀಪಾಲಂಕಾರ ಮತ್ತು ಶೌಚಾಲಯಗಳನ್ನು ನಿರ್ಮಿಸಲು ರೂ.157.04ಲಕ್ಷ ಗಳನ್ನು ಕಾದಿರಿಸಲಾಗಿದೆ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :(450)215
2) ಸದಸ್ಯರ ಹೆಸರು :ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಬಾಲ್ಕಿ)
3) ಉತ್ತರಿಸುವ ಸಚಿವರು :(ಡಾ: ವಿ.ಎಸ್.ಆಚಾರ್ಯ)
:ಗೃಹ ಸಚಿವರು

* * *

ಅ) ಬೀದರ್ ಜಿಲ್ಲೆಯ ಎಸ್.ಪಿ. ಕಛೇರಿಯೂ ಸೇರಿದಂತೆ ವಿವಿಧ ಪೊಲೀಸ್ ಠಾಣೆಗಳಿಗೆ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು? (ಹುದ್ದೆವಾರು ವಿವರಗಳನ್ನು ಒದಗಿಸುವುದು).

ಬೀದರ್ ಜಿಲ್ಲೆಯ ಎಸ್.ಪಿ. ಕಛೇರಿಯೂ ಸೇರಿದಂತೆ ವಿವಿಧ ಪೊಲೀಸ್ ಠಾಣೆಗಳಿಗೆ ಮಂಜೂರಾದ ಹುದ್ದೆಗಳ ಒಟ್ಟು ಸಂಖ್ಯೆ 1774. (ಹುದ್ದೆವಾರು ವಿವರಗಳನ್ನು ಅನುಬಂಧ "ಅ" ನಲ್ಲಿ ನೀಡಲಾಗಿದೆ)

ಆ) ಈ ಪೈಕಿ ಎಷ್ಟು ಹುದ್ದೆಗಳು ಭರ್ತಿಯಾಗಿವೆ.

ಈ ಪೈಕಿ 1720 ಎಷ್ಟು ಹುದ್ದೆಗಳು ಭರ್ತಿಯಾಗಿವೆ.

ಇ) ಎಷ್ಟು ಹುದ್ದೆಗಳು ಯಾವ ಅವಧಿಯಿಂದ ಖಾಲಿ ಇವೆ.

51 ಹುದ್ದೆಗಳು 2008 ರಿಂದ ಹಾಗೂ 3 ಹುದ್ದೆಗಳು 2007 ರಿಂದ ಖಾಲಿ ಇರುತ್ತವೆ. (ವಿವರಗಳನ್ನು ಅನುಬಂಧ "ಅ" ನಲ್ಲಿ ನೀಡಲಾಗಿದೆ)

ಈ) ಬೀದರ್ ಜಿಲ್ಲೆಯ ಗಟಿ ಭಾಗದಲ್ಲಿ ಬರುತ್ತಿರುವ ಜಿಲ್ಲೆಯಾಗಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೂ ಕಾನೂನು ಸುವ್ಯವಸ್ಥೆಯ ಹಿತದೃಷ್ಟಿಯಿಂದ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಬೀದರ್ ಜಿಲ್ಲೆಯಲ್ಲಿ ಖಾಲಿ ಇರುವ 1 ಆರ್.ಪಿ.ಐ. ಸಶಸ್ತ್ರ, 1 ಪಿ.ಐ. (ನಿಸ್ತಂತು), ಮತ್ತು 1 ಪಿ.ಐ.(ಎಫ್.ಪಿ.ಬಿ.) ಹುದ್ದೆಗಳನ್ನು ಮುಂಬಡ್ತಿಯ ಮೂಲಕ ತುಂಬಬೇಕಾಗಿದ್ದು, ಅರ್ಹ ಅಭ್ಯರ್ಥಿಗಳು ಇಲ್ಲದಿರುವ ಕಾರಣ ಮುಂಬಡ್ತಿಯನ್ನು